

ಹಾರ್ಟ್, ಸ್ಟ್ರಿಂಗ್ ಆಫ್ ನಿಕ್ಕಲ್ಸ್, ಬೇಬೀಸ್ ಟಿಯರ್ಸ್, ಡಾಂಕಿ ಟೇಲ್, ಟರ್ಟಲ್ ವೈನ್, ಫರ್ನ್‌ಗಳು ಒಗ್ಗಿಕೊಳ್ಳುತ್ತವೆ. ಫರ್ನ್, ಅಂದರೆ ಜರೀಗಿಡಗಳಲ್ಲಿಯೂ ನಮೂನೆಗಳಿವೆ. ಮೇಡನ್‌ಹೇರ್, ಬರ್ಡ್ಸ್ ನೆಸ್ಟ್, ಬೋಸ್ಟನ್, ಸ್ಟಾಗ್‌ಹಾರ್ನ್... ಈ ಗಿಡಗಳು ಸಾಮಾನ್ಯ ಪಾಟ್‌ಗಳಿಗೂ, ತೂಗು ಕುಂಡಗಳಿಗೂ ಒಗ್ಗುತ್ತವೆ.

ದಿನದ ಕೆಲ ಹೊತ್ತು ಬೆಳಕು ಸಿಗುವ ಬಾಲ್ಕನಿಯಲ್ಲಿ ಹೂಬಿಡುವ ಪೆಟುನಿಯಾ, ಪೋರ್ಚುಲೆಕಾಗಳು ಬಣ್ಣ ತುಂಬಬಲ್ಲವು. ಸ್ಪೈಡರ್ ಪ್ಲಾಂಟ್, ಟ್ರೆಡಸ್ಕಾಂಶಿಯಾ, ಸಿಂಗೋನಿಯಮ್, ಮೋನ್‌ಸ್ಟೆರಾ ಮುಂತಾದ ಒಳಾಂಗಣ ಸಸ್ಯಗಳನ್ನು ತೂಗು ಗಿಡಗಳಾಗಿ ಬಳಸಬಹುದು. ಸುಲಭಕ್ಕೆ ಸಿಗುವ 'ಟರ್ಟಲ್ ವೈನ್', 'ವಂಡರಿಂಗ್ ಜ್ಯೂ' ಗಿಡಗಳು ಬಿಸಿಲಿಗೆ ಭಾರೀ ಸುಂದರವಾಗಿ ಬೆಳೆದುಕೊಳ್ಳಬಲ್ಲವು.



ಪೆಪೆರೋಮಿಯಾ, ಡ್ಯುರೆಂಟಾ ರೆಡ್ ಪ್ಲಾಂಟ್, ಟ್ವಿಸ್ಟೆಡ್ ಹೋಯಾ, ಸೇಡಂ – ಇವು ಚಿಕ್ಕ ಜಾಗಕ್ಕೂ ಕಳೆ ತರುವ ಸಸ್ಯಗಳು. ಈಗೀಗ ಆರ್ಕಿಡ್ಸ್‌ಗಳನ್ನು ತೂಗುಕುಂಡಗಳಲ್ಲಿ ಬೆಳೆಸುವ ಪರಿಪಾಠ ಹುಟ್ಟಿಕೊಂಡಿದೆ. ಹೆಚ್ಚು ಕಾಳಜಿ ಬೇಡದ ಏರ್ ಪ್ಲಾಂಟ್‌ಗಳು ಹಾಗೂ ಮೋಸ್‌ಗಳು ಕೊಂಚ ದುಬಾರಿಯಾದರೂ ಮನೆಗೆ ಸುಂದರ ನೋಟ ನೀಡಬಲ್ಲವು.

## ತೂಗು ಗಿಡಗಳ ಕಾಳಜಿ ಹೀಗಿರಲಿ...

ಹ್ಯಾಂಗಿಂಗ್ ಪ್ಲಾಂಟ್‌ಗಳು ಎತ್ತರದ ಕೈಗೆಟುಕದ ಸ್ಥಳದಲ್ಲಿ ಇಟ್ಟರೆ ನೀರಿನ ನಿರ್ವಹಣೆ ಸವಾಲಾಗಬಹುದು. ಅತಿಯಾಗಿ ನೀರೆರೆದು ಇಡೀ ನೆಲವನ್ನು ಗಲೀಜು ಮಾಡದಂತೆ ಕಾಳಜಿ ವಹಿಸಬೇಕು. ಈ ನಿಟ್ಟಿನಲ್ಲಿ ಅತಿ ಹೆಚ್ಚೂ ಅಲ್ಲದ, ಅತಿ ಕಡಿಮೆಯೂ ಅಲ್ಲದ, ಸಮರ್ಪಕ ನೀರಿನ ಬಳಕೆ ಮಹತ್ವದ್ದು. ಒಳಾಂಗಣದಲ್ಲಿ ನೀರು ಆವಿಯಾಗುವ ಪ್ರಮಾಣ ಕಡಿಮೆಯಿರುವುದರಿಂದ ವಾರಕ್ಕೊಮ್ಮೆ ನೀರುಣಿಸಿದರೆ ಸಾಕಾಗಬಹುದು. ಹೂಕುಂಡಗಳಿಗೆ ಅಡಿ ಭಾಗಗಳಲ್ಲಿ ದೊಡ್ಡ ರಂಧ್ರಗಳಿದ್ದಲ್ಲಿ, ಇಡೀ ಕುಂಡವನ್ನೇ ನೀರಿನ ಸಿಂಕ್‌ನಲ್ಲಿಟ್ಟು, ನೀರು ಬಸಿದ ಮೇಲೆ ಪುನಃ ತೂಗು ಹಾಕುವ ಅಭ್ಯಾಸ ಮಾಡಿಕೊಳ್ಳಬಹುದು. ಆದರೆ ಪ್ರತಿ ಸಲ ಇದು ಕಷ್ಟಕರ.

ಹಾಗಾಗಿ ಸ್ಕ್ವೀಜ್ ಬಾಟಲ್‌ಗಳಿಂದ, ಸ್ಪ್ರೇಯರ್‌ನಿಂದ ಹನಿಯಾಗಿ ನೀರುಣಿಸಿ. ಸೆಲ್ಫ್ ವಾಟರಿಂಗ್ ಪಾಟ್‌ಗಳು, ನೀರುಣಿಸುವ ಗ್ಲೋಬ್‌ಗಳನ್ನು ಗಿಡ ಹಾಕಲು ಬಳಸಬಹುದು. ಬಹು ಪ್ರಸಿದ್ಧಿ ಪಡೆಯುತ್ತಿರುವ, ಗಾಳಿಯಿಂದಲೇ ತನ್ನೆಲ್ಲಾ ಅವಶ್ಯಕತೆಗಳನ್ನು ಪೂರೈಸಿಕೊಳ್ಳುವ 'ಏರ್ ಪ್ಲಾಂಟ್'ಗಳು ಹಾಗೂ ಕಡಿಮೆ ನೀರು ಬಯಸುವ ಸಕ್ಯುಲೆಂಟ್ಸ್ ಸಸ್ಯಗಳನ್ನು ಆರಿಸಿದರೆ ಸದಾ ನೀರೆರೆಯುವ ಗೋಜಿಲ್ಲ.

ಹಗುರವಾದ ಪ್ಲಾಸ್ಟಿಕ್ ಹೂಕುಂಡಗಳಿಗೆ ಮೊದಲ ಪ್ರಾಶಸ್ತ್ಯ ನೀಡಿ. ಭಾರದ ಸಿಮೆಂಟ್ ಪಾಟ್, ಟೆರಾಕೋಟಾಗಳು ತೂಗುಹಾಕಲು ಬೇಡ. ಆರರಿಂದ ಎಂಟು ಇಂಚಿನ ಪಾಟ್‌ಗಳು ನೋಡಲೂ ಚಂದ, ಬಳಕೆಗೂ ಸೂಕ್ತ. ನಿರ್ವಹಣೆ ಸುಲಭವಾಗಿಸಲು ಹೂಕುಂಡದ ಹೊರಗಿನಿಂದ ಕಂಟೇನರ್ ಅಥವಾ ಹ್ಯಾಂಗರ್ ಬಳಸುವುದು ಒಳ್ಳೆಯದು.

ನೀರೆರೆದ ಮೇಲೆ ಪಾಟ್ ಮಿಶ್ರಣ ಮತ್ತೂ ಭಾರವಾಗುತ್ತದೆ. ಹಾಗಾಗಿ ಹೆಚ್ಚು ಭಾರವಿರದ ಹಗುರವಾದ ಮಿಶ್ರಣ ತಯಾರಿಸಿಕೊಳ್ಳಿ. ಹೆಚ್ಚು ಕಾಲ ನೀರು ಹಿಡಿದಿಟ್ಟುಕೊಳ್ಳುವ ಕೋಕೋಪಿಟ್, ಪರ್ಲೈಟ್ ಬಳಸಿ. ಮಣ್ಣು–ಮರಳು ಕಡಿಮೆ ಪ್ರಮಾಣದಲ್ಲಿರಲಿ. ಕೆಲವು ರೀತಿಯ ಹೂಕುಂಡಗಳನ್ನು ನಾವೇ ತಯಾರಿಸಿಕೊಳ್ಳಬಹುದು.

## ತೂಗು 'ದಾನಿ'ಯಲ್ಲಿ ಕೂತು

ಧುಮ್ಮಿಕ್ಕುತ್ತಿರುವ ಜಲಧಾರೆಯಂತೆ, ಚಿಮ್ಮುತ್ತಿರುವ ಕಾರಂಜಿಯಂತೆ, ಸುತ್ತಲೂ ಬಣ್ಣದ ಕಿಡಿ ಹಾರಿಸುತ್ತಾ ಸಿಡಿಯುತ್ತಿರುವ ಪಟಾಕಿಯಂತೆ, ಹಸುರು ಸೀರೆಯುಟ್ಟ ರಂಭೆ ಆಕಾಶದಿಂದ ಧರೆಗೆ ಇಳಿದು ಬರುವಂತೆ... ಹೀಗೆ ಏನೇನೋ ರಮ್ಯ ಕಲ್ಪನೆ ಮೂಡಿಸುವ ಹ್ಯಾಂಗಿಂಗ್ ಪ್ಲಾಂಟ್‌ಗಳ ಜಗತ್ತು ಉಲ್ಲಾಸದಾಯಕ. ಬ್ಯುಸಿ ಜೀವನದ ಏಕತಾನತೆಗೆ ಬಣ್ಣ ಬಳಿಯುವ ಇಷ್ಟವಿದ್ದಲ್ಲಿ ಒಳಾಂಗಣ ಸಸ್ಯಗಳನ್ನೊಮ್ಮೆ ಮಾತನಾಡಿಸಿ ನೋಡಿ. ಅದರಲ್ಲೂ ಹೊಸ ಪ್ರಯತ್ನವಾಗಿ ಹ್ಯಾಂಗಿಂಗ್ ಪ್ಲಾಂಟ್‌ಗಳ ಪರಿಚಯ ಮಾಡಿಕೊಳ್ಳಿ. ಬೋರಿಂಗ್ ಒಳಾಂಗಣಕ್ಕೊಂದು ಆಲಂಕಾರಿಕ ಸ್ಪರ್ಶ ನೀಡಿ.

ಪ್ರತಿಕ್ರಿಯಿಸಿ: feedback@sudha.co.in